**ದಿನಾಂಕ: 29/06/2022ರಂದು** ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಇವರು ಹರನಗಿರಿ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ದಂಡೆ ಸ.ನಂ. 170 (P), 171 ಮತ್ತು 172 ಹರನಗಿರಿ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 12.00 ಎಕರೆ ಪ್ರದೇಶದಲ್ಲಿ, ವರ್ಷಕ್ಕೆ 45,104 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ ಮಾಡಲು **ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಹರನಗಿರಿ ಗ್ರಾಮದ ಹರನಗಿರಿ ಮರಳು ಬ್ಲಾಕ್‌ನಲ್ಲಿ ತುಂಗಭದ್ರಾ ನದಿ ಪಕ್ಕದ ಸ. ನಂ. 170 (P), 171 ಮತ್ತು 172ರಲ್ಲಿ |
| ದಿನಾಂಕ | 29/06/2022 |
| ಅಧ್ಯಕ್ಷತೆ | ಡಾ: ಎನ್. ತಿಪ್ಪೇಸ್ವಾಮಿ, ಕ.ಆ.ಸೇ.<br>ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,<br>ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ,<br>ಹಾವೇರಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ–1 |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ–2 |
| ಭಾಗವಹಿಸಿದ ಸಾರ್ವಜನಿಕರ ವಿವರ | ಅನುಬಂಧ–3 |
| ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿ | ಅನುಬಂಧ–4 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಭಿಪ್ರಾಯಗಳ ಪತ್ರಗಳು | ಅನುಬಂಧ–5 |

**ಪೀಠಿಕೆ:–**

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಇವರು ಹರನಗಿರಿ ಮರಳು ಬ್ಲಾಕ್‌ನಲ್ಲಿ ತುಂಗಭದ್ರಾ ನದಿ ದಂಡೆ ಸ.ನಂ. 170 (P), 171 ಮತ್ತು 172 ಹರನಗಿರಿ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 12.00 ಎಕರೆ ಪ್ರದೇಶದಲ್ಲಿ, ವರ್ಷಕ್ಕೆ 45,104 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ ಇವರು ದಿನಾಂಕ 14/09/2006 (ತಿದ್ದುಪಡಿ ದಿನಾಂಕ: 01/12/2009)ರಂದು ಹೊರಡಿಸಿರುವ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ ಮತ್ತು ಇತರೆ ತಿದ್ದುಪಡಿ ಪ್ರಕಾರ, ಸದರಿ ಯೋಜನೆಗೆ ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ (SEIAA), ಕರ್ನಾಟಕದಿಂದ ಪರಿಸರ ವಿಮೋಚನ ಪತ್ರ ಪಡೆಯುವ

ಪೂರ್ವದಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅನ್ನು ಪತ್ರ ಸಂಖ್ಯೆ: SEIAA 432 MIN 2021ದಿನಾಂಕ 06/12/2021ರಂದು ನೀಡಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ ಆಘಾತ ಅಂದಾಜೀಕರಣ ವರದಿಯನ್ನು' ಹಾಗೂ ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ದಿನಾಂಕ: 01/02/2022 ರಂದು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂಧಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು ಉದ್ದೇಶಿತ ಯೋಜನಾ ಸ್ಥಳದಲ್ಲಿ ದಿನಾಂಕ 29/06/2022ರಂದು ಮಧ್ಯಾಹ್ನ 12:00 ಗಂಟೆಗೆ ನಿಗದಿಪಡಿಸಲಾಗಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **" ದಿ ಟೈಮ್ಸ್ ಆಫ್ ಇಂಡಿಯಾ"** ಮತ್ತು ಕನ್ನಡ ಪತ್ರಿಕೆಯಾದ **"ಕನ್ನಡಪ್ರಭ"** ದಿನ ಪತ್ರಿಕೆಗಳಲ್ಲಿ ದಿನಾಂಕ 28/05/2022 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆಯಾದ **"ಕೌರವ" ದಿನಪತ್ರಿಕೆಯಲ್ಲೂ** ಸಹ ದಿನಾಂಕ 2/06/2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು.

ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ-ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಆಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ ಜಿಲ್ಲೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಜಿಲ್ಲೆ, ತಾಲ್ಲೂಕು ಪಂಚಾಯಿತಿ, ರಾಣೇಬೆನ್ನೂರು, ಗ್ರಾಮ ಪಂಚಾಯಿತಿ ಕಾರ್ಯಾಲಯ, ಹರನಗಿರಿ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಾವೇರಿ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ: 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

ದಿನಾಂಕ 29/06/2022 ರಂದು ಮಧ್ಯಾಹ್ನ 12:00 ಗಂಟೆಗೆ ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಹರನಗಿರಿ ಗ್ರಾಮದ ಉದ್ದೇಶಿತ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲಾಯಿತು. ಡಾ: ಸುಧಾ ಸೌಮ್ಯಲತ ಎಂ. ಕೆ, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಹಾವೇರಿ ಇವರು ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಇವರು ಪರಿಸರ ಆಘಾತ ಅಧಿಸೂಚನೆ, 2006ರ ಅನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮಗಳನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯು ಪರಿಸರ ಆಘಾತ ಅಧಿಸೂಚನೆ, 2006 ಮತ್ತು ತಿದ್ದುಪಡಿಯ ವ್ಯಾಪ್ತಿಯಲ್ಲಿ ಸೇರಿರುವುದರಿಂದ, ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಈ ಸಭೆಯನ್ನು ನಡೆಸಲು ಆಗಮಿಸಿದ್ದ ಡಾ: ಎನ್. ತಿಪ್ಪೇಸ್ವಾಮಿ, ಕ.ಆ.ಸೇ. ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾವೇರಿ ಜಿಲ್ಲೆ, ಹಾವೇರಿ ಹಾಗೂ ಅಧ್ಯಕ್ಷರು, ಪರಿಸರ ಸಾರ್ವಜನಿಕ ಆಲಿಕೆ ಸಭೆ, ಶ್ರೀ ಶಿವಾನಂದ ಉಳ್ಳೇಗಡ್ಡಿ, ಉಪ ವಿಭಾಗಾಧಿಕಾರಿಗಳು, ಹಾವೇರಿ ವಿಭಾಗ, ಹಾವೇರಿ, ಶ್ರೀ ಟಿ. ವಿ. ಸುರೇಶ್, ಉಪ ಪೊಲೀಸ್ ಅಧೀಕ್ಷಕರು, ರಾಣೆಬೆನ್ನೂರು, ಶ್ರೀ ಜಿ. ಎಸ್. ಶಂಕರ, ತಹಶೀಲ್ದಾರರು, ರಾಣೆಬೆನ್ನೂರು ಮತ್ತು ಸಭೆಯಲ್ಲಿ ಹಾಜರಿದ್ದ ಗಣ್ಯ ಮಾನ್ಯರಿಗೆ, ಜನಪ್ರತಿನಿಧಿಗಳನ್ನು, ಪತ್ರಿಕಾ ಮಾಧ್ಯಮದವರನ್ನು, ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ಹಾಗೂ ಸ್ಥಳದಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರನ್ನು ಮಂಡಳಿಯ ಪರವಾಗಿ ಸಭೆಗೆ ಸ್ವಾಗತಿಸಿದರು. ನಂತರ ಈ ಯೋಜನೆಯ ಬಗ್ಗೆ ಯೋಜನಾ ಪ್ರತಿಪಾದಕರು ತಮ್ಮೆಲ್ಲರ ಮುಂದೆ ಸದರಿ ಪ್ರಸ್ತಾವಿತ ಯೋಜನೆಯ ಕುರಿತು ಹಾಗೂ ಈ ಸುತ್ತಮುತ್ತಲಿನ ಪರಿಸರದಲ್ಲಿ ನಡೆಸಿರುವ ನೀರು, ಗಾಳಿ, ಶಬ್ದ, ಮಣ್ಣಿನ ಮಾದರಿಗಳ ಅಧ್ಯಯನ ಕುರಿತು ಹಾಗೂ ಪರಿಸರ ಸಂರಕ್ಷಣೆಗೆ ಉದ್ದಿಮೆದಾರರು ಕೈಗೊಳ್ಳುವ ಕ್ರಮಗಳ ಕುರಿತು ಪವರ್ ಪಾಯಿಂಟ್ ಪ್ರಜೆಂಟೇಶನ್‌ನ್ನು ತಮ್ಮ ಮುಂದೆ ಮಂಡಿಸುತ್ತಾರೆ ಎಂದು ತಿಳಿಸಿದರು. ಈ ಸಭೆಯಲ್ಲಿ ಉಪಸ್ಥಿತರಿರುವ ಸುತ್ತಮುತ್ತಲಿನ ಗ್ರಾಮಸ್ಥರು ಸಾರ್ವಜನಿಕರು ತಮ್ಮ ಸಲಹೆಗಳು ಅನಿಸಿಕೆಗಳು ಟೀಕೆ ಟಿಪ್ಪಣಿಗಳು ಏನಾದರೂ ಇದ್ದರೆ ಭಯ, ಆತಂಕ, ಭೀತಿ ಇಲ್ಲದೇ ಈ ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಮುಂದೆ ಬಂದು ಮಂಡಿಸಬಹುದಾಗಿದೆ ಹಾಗೂ ಅದನ್ನೆಲ್ಲವನ್ನು ವಿಡಿಯೋ ಚಿತ್ರೀಕರಣ ಮಾಡಿ ಹಾಗೂ ಈ ಸಭೆಯಲ್ಲಿ ಮಂಡಿಸಲಾದ ಚರ್ಚಿಸಲಾದ ಎಲ್ಲ ವಿಷಯಗಳ ಕುರಿತು ನಡಾವಳಿ ತಯಾರಿಸಿ ಅರಣ್ಯ ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಗೆ ಸೂಕ್ತ ಪರಾಮರ್ಶೆಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗುವುದು ಎಂದು ಹೇಳಿದರು.

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನ ಪ್ರತಿನಿಧಿ ಶ್ರೀ ರಾಘವ, ಇವರು ಹಟ್ಟಿ ಚಿನ್ನದ ಗಣಿಗೆ ಮರಳು ಗಣಿಗಾರಿಕೆ ನಡೆಸಲು ಸರ್ಕಾರದ ವತಿಯಿಂದ ಆದೇಶವನ್ನು ನೀಡಲಾಗಿರುತ್ತದೆ. ಕರ್ನಾಟಕದಲ್ಲಿ ಇನ್ನು ಮುಂದೆ ಸರ್ಕಾರದವರೇ ಮರಳು ಗಣಿಗಾರಿಕೆ ನಡೆಸಲು ಉದ್ದೇಶಿಸಿರುತ್ತಾರೆ. ಹಿಂದೆ ಎಲ್ಲಾ ಖಾಸಗಿಯವರಿಗೆ ಮರಳು ಗಣಿಗಾರಿಕೆ ಮಾಡಲು ಅನುಮತಿ ನೀಡಲಾಗುತ್ತಿತ್ತು. ಆದರೆ ಇನ್ನು ಮುಂದೆ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಲ್ಲ ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡಂತಹ ಒಂದು ಕಮಿಟಿಯನ್ನು ರಚನೆ ಮಾಡಿದ್ದಾರೆ. ಈ ಕಮಿಟಿಯವರು ಈ ಎಲ್ಲ ಕೆಲಸಗಳನ್ನು ಮಾನಿಟರ್ ಮಾಡಿ ಕಮಿಟಿ ವತಿಯಿಂದ ಸುಸೂತ್ರವಾಗಿ ಜನ ಸಾಮಾನ್ಯರಿಗೆ ಎಲ್ಲರಿಗೂ ಕೂಡ ಮರಳು ಸಿಗುವ ಹಾಗೆ ಆಗಬೇಕು ಅಂದುಕೊಂಡು ಸರ್ಕಾರದವರು ಮರಳು ನೀತಿಯನ್ನು

ಪ್ರತಿಪಾದಿಸಿದ್ದಾರೆ. ಸರ್ಕಾರದವರು ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ ಮತ್ತು ಅನಧಿಕೃತವಾಗಿ ನಡೆಯುತ್ತಿರುವ ಮರಳು ಗಣಿಗಾರಿಕೆಯನ್ನು ತಡೆಯುವ ನಿಟ್ಟಿನಲ್ಲಿ ಹೊಸ ಮರಳು ನೀತಿಯನ್ನು ಜಾರಿ ಮಾಡಿರುತ್ತಾರೆ. ಇದರ ಉದ್ದೇಶ ಎಲ್ಲ ಜನಸಾಮಾನ್ಯರಿಗೆ ಮರಳು ಸಿಗುವ ಹಾಗೆ ಆಗಬೇಕು ಸಾರ್ವಜನಿಕರಿಗೆ ಹಳ್ಳಿಯಲ್ಲಿ ಇರುವ ಜನರಿಗೆ ಒಂದೇ ದರದಲ್ಲಿ ಅಂದರೆ ನಿಯಮಿತ ದರದಲ್ಲಿ ಎಲ್ಲರಿಗೂ ಮರಳಿನ ಅಗತ್ಯ ಇದೆ. ಅದನ್ನು ಪೂರೈಸುವ ಜವಾಬ್ದಾರಿ ಸರಕಾರದ್ದು ಆಗಿದೆ. ಆ ಒಂದು ನಿಟ್ಟಿನಲ್ಲಿ ಏಳು ನೂರು ರೂಪಾಯಿ ಒಂದು ಟನ್ನಿಗೆ ಸರ್ಕಾರ ನಿಗದಿ ಮಾಡಿದೆ. ಇದರಂತೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರು ಮರಳನ್ನು ಪ್ರತಿಯೊಬ್ಬರಿಗೂ ದೊರಕುವ ಹಾಗೆ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ. ಗ್ರಾಮಕ್ಕೆ ಈ ಮರಳಿನಿಂದ ಬಂದಂತಹ ಹಣದಲ್ಲಿ ರಾಜಧನವನ್ನು ಸರ್ಕಾರಕ್ಕೆ ಕಟ್ಟಲಾಗುತ್ತೆ. ಆ ರಾಜಧನದಲ್ಲಿ ಶೇಕಡ 25 ರಷ್ಟು ಹಣವನ್ನು ಗ್ರಾಮ ಪಂಚಾಯಿತಿಯವರಿಗೆ ಕೊಡಲಾಗುತ್ತದೆ. ಈ ಹಣದಲ್ಲಿ ಗ್ರಾಮ ಪಂಚಾಯಿತಿಯವರು ತಮ್ಮ ಗ್ರಾಮಕ್ಕೆ ಬೇಕಾದಂತಹ ಸೌಕರ್ಯಗಳನ್ನು ಮಾಡುವ ಅವಕಾಶ ಇರುತ್ತದೆ. ರಸ್ತೆ ಆಗಬಹುದು, ಡ್ರೈನೇಜ್ ಸಿಸ್ಟಮ್ ಆಗಿರಬಹುದು, ಶೌಚಾಲಯ ಆಗಬಹುದು, ಅಂಗನವಾಡಿ ಅಥವಾ ಶಾಲೆಗಳಲ್ಲಿ ದುರಸ್ತಿ ಆಗಿರಬಹುದು, ಈ ತರಹ ಎಲ್ಲಾ ಕಾರ್ಯಗಳಿಗೆ ಅದನ್ನು ಬಳಸಿಕೊಂಡು ಗ್ರಾಮದ ಉದ್ಧಾರನೂ ಆಗುತ್ತೆ ಅದರ ಜೊತೆಯಲ್ಲಿ ಜನಗಳಿಗೂ ಕೂಡ ಇದರಿಂದ ಅನುಕೂಲ ಆಗುತ್ತೆ. ಈ ಅಕ್ರಮ ಗಣಿಗಾರಿಕೆಯನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರದವರು ಇನ್ನು ಮುಂದೆ ಈ ಯೋಜನೆಯನ್ನು ಅಳವಡಿಸಿಕೊಂಡಿದೆ. ಅದರಿಂದ ಇದು ವ್ಯವಸ್ಥಿತವಾಗಿ ಇನ್ನು ಮುಂದೆ ನಡೆಯುತ್ತದೆ. ಹಾಗೆ ಈ ತುಂಗಭದ್ರಾ ನದಿಯ ತೀರದಲ್ಲಿ ಸರ್ಕಾರಿ ಭೂಮಿಯಲ್ಲಿ ಮಾತ್ರ ಈ ಗಣಿಗಾರಿಕೆಯನ್ನು ಮಾಡಲಾಗುತ್ತದೆ. ನದಿಯ ದಡದಲ್ಲಿ ಮಾತ್ರ ಮರಳನ್ನು ತೆಗೆಯಲಾಗುತ್ತದೆ. ಆ ದಡದಲ್ಲಿ ಬರಿ ಒಂದು ಮೀಟರ್ ಅಷ್ಟೆ ತೆಗೆಯಲು ಅವಕಾಶ ಇರುತ್ತದೆ. ಒಂದು ಮೀಟರ್ ಅಷ್ಟೆ ಮರಳನ್ನು ತೆಗೆಯಲಾಗುವುದು. ಏಕೆಂದರೆ ಅತಿ ಹೆಚ್ಚು ತೆಗೆದಾಗ ತಗ್ಗಾಗುವುದು, ದನಕರುಗಳು ಸಾಯುವುದು ಅಥವಾ ಮನುಷ್ಯರು ಬಿದ್ದು ಸಾಯುವುದು ಈ ತರ ಎಲ್ಲಾ ಅನಾಹುತಗಳನ್ನು ನಾವು ನೋಡುತ್ತಿದ್ದೇವೆ ಇದೆಲ್ಲ ವೈಜ್ಞಾನಿಕವಾಗಿ ಇನ್ನು ಮುಂದೆ ನಡೆಯುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದನ್ನೆಲ್ಲ ಪರಿವೀಕ್ಷಣೆ ಮಾಡಿ ಸರಿಯಾಗಿ ನಡೆಯುವ ಕಾರ್ಯಕ್ರಮ ಇನ್ನುಮುಂದೆ ಆಗುತ್ತೆ. ಅದಕ್ಕೆ ಸರ್ಕಾರದವರು 2022ರ ನೂತನ ಮರಳು ನೀತಿಯನ್ನು ತಂದಿದ್ದಾರೆ. ಈ ನೂತನ ಮರಳು ನೀತಿಯಲ್ಲಿ ಸಾರ್ವಜನಿಕರಿಗೆ ಎಲ್ಲರಿಗೂ ಉಪಯೋಗ ಆಗುತ್ತದೆ. ಅದರ ಜೊತೆಗೆ ಗ್ರಾಮದ ಉದ್ಧಾರನೂ ಮಾಡಿಕೊಳ್ಳಬಹುದಾಗಿದೆ. ಹಾಗೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ವತಿಯಿಂದ ಈ ಮರಳು ತೆಗೆಯುವ ಜೊತೆಗೆ ಹಲವಾರು ಗ್ರಾಮಕ್ಕೆ ಸೌಲಭ್ಯಗಳನ್ನು ನೀಡಲು ಕೆಲವು ಹಣವನ್ನು ಮೀಸಲಿಟ್ಟಿರುತ್ತದೆ. ಆ ಹಣದಲ್ಲಿ ಸರ್ಕಾರಿ ಶಾಲೆಗಳಾಗಬಹುದು, ಕುಡಿಯುವ ನೀರಾಗಬಹುದು, ಚರಂಡಿ ಜೀರ್ಣೋದ್ಧಾರ ಆಗಬಹುದು ಈ ತರಹ ಎಲ್ಲ ಕೆಲಸಗಳನ್ನು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ವತಿಯಿಂದ ಮಾಡಲಾಗುತ್ತದೆ. ಇದು ಸರ್ಕಾರದಿಂದ ನಡೆಯುತ್ತಿರುವಂತಹ ಕಾರ್ಯಕ್ರಮ ಇದಕ್ಕೆ ಎಲ್ಲ ಸಾರ್ವಜನಿಕರ ಸಹಭಾಗಿತ್ವ ಸಹಕಾರ ಬೇಕಾಗಿರುತ್ತೆ. ಹಾಗಾಗಿ ಗ್ರಾಮಸ್ಥರು ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು, ಅಧ್ಯಕ್ಷರು ಇದರಲ್ಲಿ ಒಳಗೊಂಡಿರುತ್ತಾರೆ. ಹಾಗೆ ಗ್ರಾಮದ ಮಟ್ಟದಲ್ಲಿ ಕೆರೆ, ಹಳ್ಳ ಕೊಳ್ಳಗಳಲ್ಲಿ ಕೂಡ ಗ್ರಾಮಕ್ಕೆ ಮರಳು ತೆಗೆಯಲು ಪರ್ಮಿಷನ್ ಕೊಟ್ಟಿರುತ್ತಾರೆ. ಮೂರುನೂರು ರೂಪಾಯಿ ಪ್ರತಿ ಟನ್ನಿಗೆ ಗ್ರಾಮಸ್ಥರು ಗ್ರಾಮ ಪಂಚಾಯಿತಿಯಿಂದ ಈ ಮರಳನ್ನು ತೆಗೆಯುವ ಅವಕಾಶವನ್ನು ಸರ್ಕಾರದಿಂದ ಮಾಡಲಾಗಿದೆ. ಈ ನದಿಯಿಂದ ಏನು ಬರುತ್ತೆ ಅದು ಮಾತ್ರ ಸರ್ಕಾರಿ ಭೂಮಿಯಲ್ಲಿ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರೆ ತೆಗೆಯುವ

ಒಂದು ಕಾರ್ಯಕ್ರಮ ಈ ಸಣ್ಣ ಪುಟ್ಟ ಹಳ್ಳಿಗಳಲ್ಲಿ ಗ್ರಾಮ ಪಂಚಾಯತ್ ವತಿಯಿಂದ ಈ ಕೆಲಸಗಳನ್ನು ಮಾಡುವ ಅವಕಾಶ ಇದೆ. ಹಾಗೆಯೇ ಪ್ರತಿಯೊಬ್ಬರಿಗೂ ಈ ಒಂದು ಕಾರ್ಯಕ್ರಮದಿಂದ ಗ್ರಾಮದ ಉದ್ಧಾರದ ಜೊತೆಯಲ್ಲಿ ಎಲ್ಲರಿಗೂ ಮರಳನ್ನು ಸಿಗಲಿ ಎನ್ನುವ ಉದ್ದೇಶದಿಂದ ಇದು ನಾವು ಹೇಗೆ ಗ್ಯಾಸ್ ಸಿಲಿಂಡರ್ ಬೇಕಾದರೆ ಮೊಬೈಲ್‌ನಲ್ಲಿ ಬುಕ್ ಮಾಡುತ್ತೇವೆ ಅದೇ ತರಹ ಇನ್ನು ಮುಂದೆ ಮರಳನ್ನು ಕೂಡ ನೀವು ಬುಕ್ ಮಾಡಬಹುದು. ಹಾಗಾಗಿ ನಿಮಗೆ ಎಷ್ಟು ಬೇಕಾಗುತ್ತದೆ ಅಷ್ಟು ಪ್ರಮಾಣದ ಮರಳನ್ನು ನಾವು ಮೊಬೈಲ್ ಮುಖಾಂತರವೇ ಏಳು ನೂರು ರೂಪಾಯಿ ಪ್ರತಿ ಟನ್ನಿಗೆ ಬುಕ್ ಮಾಡಿಕೊಳ್ಳಬಹುದು.

ಇದೊಂದು ಸರ್ಕಾರದ ಅತ್ಯುತ್ತಮವಾದಂತಹ ಯೋಜನೆಯಾಗಿದೆ. ಹಾಗಾಗಿ ಮುಂದಿನ ಈ ಯೋಜನೆಯ ಒಂದು ಕೂಲಂಕುಶ ವರದಿಯನ್ನು ಸಿದ್ಧಪಡಿಸಿ ತಮ್ಮ ಮುಂದೆ ಪ್ರಸ್ತುತ ಪಡಿಸಲಿದ್ದಾರೆ. ತಾವೆಲ್ಲ ಇದನ್ನು ಕೇಳಿ ನಂತರ ನಿಮಗೇನಾದರೂ ಅನಿಸಿಕೆಗಳಿದ್ದಲ್ಲಿ ಮಾನ್ಯ ಅಪರ ಜಿಲ್ಲಾಧಿಕಾರಿಗಳ ಮುಂದೆ ಬಂದು ನಿಮ್ಮ ಅನಿಸಿಕೆಗಳು, ಅಭಿಪ್ರಾಯಗಳನ್ನು ಈ ವೇದಿಕೆಯ ಮುಂದೆ ವ್ಯಕ್ತಪಡಿಸಬಹುದು. ಈಗ ಮೆ॥ ಸ್ನೇಹಾ ಹೈಟೆಕ್ ಪ್ರೋಡಕ್ಟ್ಸ್‌ನ ಪ್ರತಿನಿಧಿಯಾದ ಶ್ರೀ ಸಂಜೀವೆಗೌಡ ಇವರು, ಯೋಜನೆಯ ವಿವರವನ್ನು ನೀಡಲಿದ್ದಾರೆ ಎಂದು ತಿಳಿಸಿದರು.

ಮೆ.ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಮೆ॥ ಸ್ನೇಹಾ ಹೈಟೆಕ್ ಪ್ರೋಡಕ್ಟ್ಸ್‌ನ ಪ್ರತಿನಿದಿಯಾದ ಶ್ರೀ ಸಂಜೀವೆಗೌಡ ಇವರು, ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಹರನಗಿರಿ ಮರಳು ಬ್ಲಾಕ್‌ನ ತುಂಗಭದ್ರಾ ನದಿ ದಂಡೆ ಸ.ನಂ. 170 (P), 171 ಮತ್ತು 172 ಹರನಗಿರಿ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 12.00 ಎಕರೆ ಪ್ರದೇಶದಲ್ಲಿ, ವರ್ಷಕ್ಕೆ 45,104 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಉದ್ದೇಶಿತ ಮರಳು ಗಣಿಗಾರಿಕೆಯನ್ನು ಸಾಮಾನ್ಯ ಮರಳು ಗಣಿಗಾರಿಕೆ ವಿಧಾನದಲ್ಲಿ ಮಾಡಲಾಗುವುದು. ಹಿಟಾಚಿ ಮತ್ತು ಜೆಸಿಬಿಯನ್ನು ಅಗೆಯಲು ಮತ್ತು ಲೋಡ್ ಮಾಡುವ ಚಟುವಟಿಕೆಗಳಿಗೆ ಬಳಸಲಾಗುವುದೆಂದು ಸಭೆಗೆ ತಿಳಿಸಿದರು. ಸದರಿ ಯೋಜನೆ ಕುರಿತಾದ ಪ್ರಮುಖ ಅಂಶಗಳು, ಯೋಜನೆಯಿಂದ ಸುತ್ತಲಿನ ಪರಿಸರಕ್ಕೆ ಆಗಬಹುದಾದ ಪರಿಣಾಮ, ಪರಿಸರ ನಿರ್ವಹಣೆ, ಮಾಲಿನ್ಯ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗುವ ಕ್ರಮಗಳು, ಸಿಎಸ್‌ಆರ್ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು. ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿಯನ್ನು **ಅನುಬಂಧ-4**ರಲ್ಲಿ ಲಗತ್ತಿಸಿದೆ.

(1) ಮೌನೇಶ, ಹರನಗಿರಿ ಗ್ರಾಮ

ಇವರು ಮಾತನಾಡುತ್ತಾ, ನಮ್ಮದು 3 ಎಕರೆ 9 ಗುಂಟೆ ಜಮೀನಿದೆ. ಈ ತರಹ ಮೊದಲು ಇಲ್ಲಿ ಗಣಿಗಾರಿಕೆ ಆಗಿದೆ. ಆ ಗಣಿಗಾರಿಕೆಗಾಗಿ ವರ್ಷಕ್ಕೆ ಇಂತಿಷ್ಟು ಅಂತ ನಿಗದಿ ಮಾಡಿ ನಮ್ಮ ಜಮೀನನ್ನು ಬಾಡಿಗೆಗೆ ತೆಗೆದು ಕೊಂಡಿರುತ್ತಾರೆ. ಆ ದುಡ್ಡು ನಮಗೆ ಬಂದು ಸೇರಲಿಲ್ಲ. ಇದಕ್ಕೆ ಮುಂದೆ ಏನು ಎಂದು ತಾವು ಗಮನ ಹರಿಸಬೇಕು ಮತ್ತು ಇದು ಎರಡನೇ ಸಲ ಈ ತರಹದ ಸಭೆ ಮಾಡುತ್ತಿರುವುದು. ಈ ಗಣಿಗಾರಿಕೆಯಿಂದ ನಮಗೆ ಯಾವ ಉಪಯೋಗವು ಆಗಿಲ್ಲವೆಂದು ಹೇಳ ಬಯಸುತ್ತೇವೆ.

ಇದಕ್ಕೆ ಉತ್ತರವಾಗಿ ಶ್ರೀ ರಾಘವ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯವರು, ಇಲ್ಲಿಯವರೆಗೂ ಖಾಸಗಿಯವರಿಗೆ ಗಣಿಗಾರಿಕೆ ಮಾಡಲು ಪರವಾನಗಿ ಕೊಡಲಾಗುತ್ತಿತ್ತು. ಇನ್ನು ಮುಂದೆ ಸರ್ಕಾರದ ವತಿಯಿಂದಲೇ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಕೆಲಸಗಳು ನಡೆಯುತ್ತದೆ. ಹಾಗಾಗಿ ಈ ತರಹದ ಯಾವುದೇ ರೀತಿಯ ಅನಾನುಕೂಲಗಳು ಆದರೆ ತಾವು ಬಂದು ಆ ದೂರನ್ನು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಅವರ ಹತ್ತಿರ ಅಥವಾ ಜಿಲ್ಲಾಧಿಕಾರಿಗಳಿಗೆ ಅಥವಾ ಗ್ರಾಮ ಪಂಚಾಯತಿ ವತಿಯಿಂದ ತಹಶೀಲ್ದಾರರಿಗಾದರೂ ಸಲ್ಲಿಸಬಹುದು ಎಂದು ತಿಳಿಸಿದರು.

(2) ಶ್ರೀ ಕುಬೇರ ತೋಪಿನ, ಹರನಗಿರಿ ಗ್ರಾಮ

ಇವರು ಮಾತನಾಡುತ್ತಾ, ಇಷ್ಟು ದಿನ ಅಕ್ರಮ ಗಣಿಗಾರಿಕೆಯು ನಡೆಯುತ್ತಿತ್ತು. ಅದನ್ನು ಪ್ರಶ್ನಿಸಿದಾಗ ಅಲ್ಲಿ ಗಣಿಗಾರಿಕೆ ಮಾಡುವವರು ಅದಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಹಾಗೂ ಜಿಲ್ಲಾಧಿಕಾರಿಗಳನ್ನು ಕೇಳಿ ಎಂದು ಹೇಳುತ್ತಿದ್ದರು. ಈ ಬಗ್ಗೆ ಪ್ರತಿ ಬಾರಿಗೂ ಜಿಲ್ಲಾಧಿಕಾರಿಗಳನ್ನು ಕೇಳಲು ಹಾವೇರಿಗೆ, ರಾಣಿಬೆನ್ನೂರಿಗೆ ಹೋಗಲು ಪ್ರಯಾಣಕ್ಕೆ ವೆಚ್ಚವಾಗುತ್ತದೆ. ಅದಕ್ಕೆ ಸ್ಥಳೀಯವಾಗಿ ಸಿಬ್ಬಂದಿಯನ್ನು ನೇಮಿಸಿ ಎಂದು ಹೇಳಿದರು.

ಇದಕ್ಕೆ ಉತ್ತರವಾಗಿ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತ, ಇಲ್ಲಿಯರೆಗೆ ಅನಧಿಕೃತವಾಗಿ ಮರಳು ಗಣಿಗಾರಿಕೆಯು ನಡೆದಿರುವುದು ಸತ್ಯವಾಗಿರುತ್ತದೆ. ಈ ಮೊದಲು ಇರ್ಕಾನ್ ಕಂಪನಿಯವರು ರಸ್ತೆ ಕಾಮಗಾರಿಗಾಗಿ, ಸರ್ಕಾರದ ಅನುಮತಿ ಮೇರೆಗೆ ಮರಳು ಗಣಿಗಾರಿಕೆ ಮಾಡಿರುತ್ತಾರೆ. ಅನಧಿಕೃತ ಮರಳು ಗಣಿಗಾರಿಕೆಯನ್ನು ತಡೆಗಟ್ಟಲು ಸರ್ಕಾರವು ಹೊಸ ಮರಳು ನೀತಿಯನ್ನು ಜಾರಿಗೆ ತಂದಿರುತ್ತದೆ. ಇದರ ಪ್ರಕಾರ, ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯು ಸರ್ಕಾರದ ಕಂಪನಿಯಾಗಿದ್ದು, ಸರ್ಕಾರದ ಅಧಿಸೂಚನೆ ಮೇರೆಗೆ ಉತ್ತರ ಕರ್ನಾಟಕದಲ್ಲಿ ಎಲ್ಲೆಲ್ಲಿ ನದಿಗಳಲ್ಲಿ ಮರಳು ಲಭ್ಯತೆ ಇರುತ್ತದೆಯೋ ಅಲ್ಲಲ್ಲಿ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯ ವತಿಯಿಂದ ಮರಳನ್ನು ತೆಗೆಸಬೇಕು ಮತ್ತು ಒಂದು ನಿಗದಿತ ದರದಲ್ಲಿ ಅವಶ್ಯಕತೆ ಇದ್ದವರಿಗೆ ಆ ಮರಳನ್ನು ಕೊಡಬೇಕು ಎಂಬುದು ಸರ್ಕಾರದ ನೀತಿಯಾಗಿದೆ. ಮತ್ತು ಮರಳು ತೆಗೆದರೂ ನಿಗದಿಯಾದ ಸರ್ವೆ ನಂಬರಿನಲ್ಲಿ ನಿಗದಿಯಾದ ಉದ್ದ ಅಗಲಗಳಲ್ಲಿ ಮತ್ತು ಒಂದು ಮೀಟರ್ ಆಳದವರೆಗೆ ಮಾತ್ರ ಮರಳು ತೆಗೆಯಬೇಕು ಮತ್ತು ಒಂದು ವರ್ಷಕ್ಕೆ ನಿಗದಿ ಪಡಿಸಿದ ಪ್ರಮಾಣಗಳಷ್ಟು ಮಾತ್ರ ತೆಗೆಯಬೇಕು. ಇದನ್ನು ಯೋಜನೆಯ ಸಾರಾಂಶದಲ್ಲಿ ವಿವರಿಸಿದ್ದಾರೆ. ಈ ಯೋಜನೆಯನ್ನು ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಮಾಡಲಾಗಿದೆ. ಇದು ಕೇವಲ ಒಂದು ಗ್ರಾಮಕ್ಕೆ ಸೀಮಿತವಾಗಿರದೇ, ಎಲ್ಲ ಸಾರ್ವಜನಿಕರಿಗೂ ಮರಳು ಸಿಗಬೇಕೆಂಬುದು ಸರ್ಕಾರದ ಆಶಯವಾಗಿದೆ. ಇದು ಒಂದು ಮರಳಿನ ಡಿಪೋ ಇದ್ದ ಹಾಗೆ ಕಾನೂನುಬದ್ಧವಾಗಿ ಮರಳು ಗಣಿಗಾರಿಕೆ ನಡೆಸಬೇಕೆಂಬುದು ಸರ್ಕಾರದ ನೀತಿಯಾಗಿದೆ ಎಂದು ಹೇಳಿದರು. ಓವರ್‌ಲೋಡ್ ಮಾಡಿದರೆ, ರಸ್ತೆ ಹಾಳಾಗಬಹುದು, ಸಾರ್ವಜನಿಕರಿಗೆ ಮತ್ತು ನದಿ ಪಾತ್ರದ ರೈತರಿಗೆ ತೊಂದರೆಯಾದರೆ ಪ್ರಶ್ನಿಸುವ ಅಧಿಕಾರ ಸಾರ್ವಜನಿಕರಿಗೆ ಇದೆ. ಮರಳು ಮಾರಾಟ ಮಾಡಿದ ಹಣದಲ್ಲಿ ಶೇಕಡ 25

ರಷ್ಟು ಹಣವನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಕೊಡುತ್ತಾರೆ. ಗ್ರಾಮ ಪಂಚಾಯಿತಿಗೆ ಬಂದಂತಹ ಹಣವನ್ನು ಆ ಊರಿನ ರಸ್ತೆ, ಚರಂಡಿ, ದೀಪ, ಕುಡಿಯುವ ನೀರು ಇತ್ಯಾದಿ ಮೂಲಭೂತ ಸೌಕರ್ಯಗಳು, ಶಾಲೆಗಳು, ಅಂಗನವಾಡಿಗಳು, ಆಸ್ಪತ್ರೆ ಇಂತವುಗಳ ರಿಪೇರಿ ಮತ್ತು ಜೀರ್ಣೋದ್ಧಾರ ಮಾಡಿಸಬಹುದಾಗಿದೆ.

(3) ಶ್ರೀ ಹೊನ್ನಪ್ಪ ಪೂಜಾರ, ಹರನಗಿರಿ ಗ್ರಾಮ

ಇವರು ಮಾತನಾಡುತ್ತಾ, ಹಿಂದೆ ನಡೆದಿರುವ ಗಣಿಗಾರಿಕೆಯ ಬಗ್ಗೆ ವಿವರಿಸುತ್ತಾ ಹಿಟ್ಯಾಚಿ ಬಳಸಿ ನದಿ ಪಾತ್ರದಲ್ಲಿ 2 ರಿಂದ 3 ಮೀಟರ್ ಆಳದಲ್ಲಿ ಗಣಿಗಾರಿಕೆ ಮಾಡಿರುತ್ತಾರೆ ಮತ್ತು ಒಂದು ಪಾಸಿನಲ್ಲಿ ಎರಡು ಟ್ರಿಪ್ ಮರಳು ಸಾಗಿಸುತ್ತಾರೆ ಮತ್ತು ಆಳವಾಗಿ ಗಣಿಗಾರಿಕೆ ಮಾಡುವುದರಿಂದ ದನಕರುಗಳು ಮತ್ತು ಕುರಿಗಳು ಮೃತಪಟ್ಟಿರುತ್ತವೆ ಎಂದು ಆರೋಪಿಸಿ ಮಾನ್ಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಇದಕ್ಕೆ ಅಪರ ಜಿಲ್ಲಾಧಿಕಾರಿಗಳು ಮನವಿಯನ್ನು ಸ್ವೀಕರಿಸಿ ಸಭೆಯಲ್ಲಿದ್ದವರನ್ನು ಉದ್ದೇಶಿಸಿ ಗ್ರಾಮಪಂಚಾಯಿತಿಯು ಸರ್ಕಾರದ ಒಂದು ಭಾಗವಾಗಿದ್ದು ಗ್ರಾಮ ಪಂಚಾಯಿತಿಯ ಸದಸ್ಯರು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸರ್ಕಾರದ ಚುನಾಯಿತ ಪ್ರತಿನಿಧಿಗಳಾಗಿದ್ದು ಇಂತಹದೊಂದು ಸರ್ಕಾರದ ಯೋಜನೆಯನ್ನು ಪ್ರಾರಂಭ ಮಾಡುವ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಹೇಳಬಹುದು ಎಂದು ತಿಳಿಸಿದರು.

(4) ಶ್ರೀ ಶೇಖಪ್ಪ ನಾಗಪ್ಪ ತೋಪಿನ, ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಹರನಗಿರಿ

ಇವರು ಮಾತನಾಡುತ್ತಾ ಕಾನೂನು ಪ್ರಕಾರ ಮರಳು ಗಣಿಗಾರಿಕೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿರುವುದಿಲ್ಲ ಎಂದು ಸಭೆಗೆ ಹೇಳಿದರು. ಹಿಂದೆ ಕಾನೂನು ಬಾಹಿರವಾಗಿ ಮರಳು ಗಣಿಗಾರಿಕೆ ಮಾಡುವವರ ಬಗ್ಗೆ ತಿಳಿಸಿ ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳಲು ಮನವಿ ಮಾಡಿದರು. ಈ ಹಿಂದೆ ಸುಮಾರು 10 ಕೋಟಿ ರೂಪಾಯಿ ಮೌಲ್ಯದ ಉಸುಕು ಮಾರಾಟವಾಗಿದ್ದು ಅದರ 25% ರಾಯಲ್ಟಿ ಹಣ ಗ್ರಾಮ ಪಂಚಾಯಿತಿಗೆ ಸೇರಬೇಕಾಗಿದ್ದು ಇಲ್ಲಿಯವರೆಗೂ ಅದು ಬಂದಿರುವುದಿಲ್ಲ ಆದ್ದರಿಂದ ಪಾಸಿನ ವಿವರ ನೀಡಿದರೆ ಎಷ್ಟು ಮೊತ್ತದ ಮರಳು ಗಣಿಗಾರಿಕೆ ಆಗಿರುತ್ತದೆ ಎಂಬುದರ ಲೆಕ್ಕ ಸಿಗುತ್ತದೆ ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ಅದರ ವಿವರ ನೀಡಬೇಕೆಂದು ಅಪರ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು. ಇದಕ್ಕೆ ಅಪರ ಜಿಲ್ಲಾಧಿಕಾರಿಗಳು ಈ ಮೊದಲೇ ಉತ್ತರಿಸಿದಂತೆ ಈ ಮೊದಲು ಮಾಡಿದ ಗಣಿಗಾರಿಕೆಯ ಎಲ್ಲಾ ವಿವರಗಳು ಅಂದರೆ ಎಷ್ಟು ಪ್ರಮಾಣದ ಲೋಡ್ ಹೋಗಿದೆ ಎಷ್ಟು ದಿನಗಳವರೆಗೆ ಈ ಗಣಿಗಾರಿಕೆ ಮಾಡಿದ್ದಾರೆ ಎಂಬುದರ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ಈ ಮೊದಲು ಗಣಿಗಾರಿಕೆ ಮಾಡಿದ ಇರಕಾನ್ ಕಂಪನಿಯವರನ್ನು ಕರೆಸಿ ಎಲ್ಲಾ ವಿವರಗಳನ್ನು ತೆಗೆಸಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಕೊಡಬೇಕೆಂದು ಹೇಳಿದರು.

(5) ಶ್ರೀ ಹನುಮರೆಡ್ಡಿ ಬಿ. ಗಿರಡ್ಡಿ, ಹರನಗಿರಿ

ಇವರು ಮಾತನಾಡುತ್ತಾ, ಈ ಊರಿನಲ್ಲಿ ಮರಳು ಗಣಿಗಾರಿಕೆಯು ಯೋಜನಾ ಬದ್ಧವಾಗಿ ನಡೆಯಲು ಸಾಧ್ಯವಿಲ್ಲ. ಈ ಹಿಂದೆಯೂ ಸರಿಯಾಗಿ ನಡೆದಿಲ್ಲ ಎಂದು ಹೇಳಿದರು. ಅದಕ್ಕೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಇದು ಸರ್ಕಾರದ ಯೋಜನೆ ಅನ್ನುವುದು ನಿಮ್ಮ ಗಮನದಲ್ಲಿ ಇರಲಿ. ಈ ಗಣಿಗಾರಿಕೆಯು ಕಾನೂನುಬದ್ಧವಾಗಿ ನಡೆಯದಿದ್ದರೆ ನಮಗೆ ಬಂದು ದೂರು ನೀಡಬಹುದಾಗಿದೆ. ಅದಕ್ಕೆ ಮುಂದಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

(6) ಶ್ರೀ ಗಂಗಾಧರ ಐರಣಿ, ಗ್ರಾಮ ಪಂಚಾಯತಿ ಸದಸ್ಯರು, ಹರನಗಿರಿ

ಇವರು ಮಾತನಾಡುತ್ತಾ, ಈ ಹಿಂದಿನ ಗಣಿಗಾರಿಕೆ ಸಂದರ್ಭದಲ್ಲಿ ಮರಳು ಸಾಗಾಣಿಕೆ ರಸ್ತೆಯನ್ನು ಮಾಡಿಕೊಂಡಿದ್ದು, ಆ ರಸ್ತೆಗಳು ಹಾಳಾದಾಗ ವಾಹನಗಳು ಜಮೀನಿನ ರಸ್ತೆಯಲ್ಲಿ ಓಡಾಡುತ್ತವೆ. ಇದರಿಂದ ಧೂಳಿನ ಪ್ರಮಾಣ ಅಧಿಕವಾಗಿ ಬೆಳೆಗಳ ಮೇಲೆ ಬಂದು ಬೀಳುತ್ತಿವೆ. ಇದರಿಂದ ಬೆಳೆಗಳು ಹಾಳಾಗುತ್ತಿವೆ. ಇಲ್ಲಿ ವಾಹನಗಳನ್ನು ಚಲಾಯಿಸಬೇಡಿ ಎಂದರೂ ಕೇಳದೆ ವಾಹನ ಚಲಾಯಿಸುತ್ತಾರೆ. ಇದರಿಂದ ರೈತಾಪಿ ಜನರಿಗೆ ತುಂಬಾ ಸಮಸ್ಯೆ ಆಗುತ್ತಿದೆ. ಆದ್ದರಿಂದ ಜಮೀನಿನ ರಸ್ತೆಗಳಲ್ಲಿ ಮರಳು ಸಾಗಣಿಕೆ ವಾಹನಗಳ ಓಡಾಟ ನಿಷೇದಿಸಲು ಮನವಿ ಮಾಡಿಕೊಂಡರು. ಗ್ರಾಮಗಳ ರಸ್ತೆಗಳಲ್ಲಿ ಸಾರ್ವಜನಿಕರು, ದನಕರುಗಳು, ಕುರಿಗಳು ಸಾಗುತ್ತಿರುತ್ತಾರೆ. ಆದಾಗ್ಯೂ ವಾಹನಗಳ ಚಾಲಕರು ವೇಗವನ್ನು ತಗ್ಗಿಸದೆ ಹೋಗುತ್ತಿರುತ್ತಾರೆ. ವಾಹನಗಳು ವೇಗ ಮಿತಿಗೊಳಪಟ್ಟು ಚಲಿಸಬೇಕೆಂದು ವಿನಂತಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಉತ್ತರಿಸುತ್ತ, ಈ ಕುರಿತು ಯೋಜನಾದಾರರಾದ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಇವರಿಗೆ ಸೂಚನೆಗಳನ್ನು ನೀಡುತ್ತೇನೆ. ಮುಂದೆ ಈ ತರಹದ ಯಾವುದೇ ತೊಂದರೆ ಆಗದಂತೆ ಮೊದಲೇ ಯೋಜನೆ ರೂಪಿಸಿದ್ದಾರೆ. ರಸ್ತೆಗಳಲ್ಲಿ ಧೂಳಿನ ನಿವಾರಣೆಗೆ ನೀರು ಸಿಂಪಡಿಸುವ ಬಗ್ಗೆ ಯೋಜಿಸಿದ್ದಾರೆ. ಸುರಕ್ಷಿತವಾದ ವೇಗದಲ್ಲಿ ವಾಹನಗಳು ಚಲಿಸಲು ನಿಯಂತ್ರಣ ಕ್ರಮ ಕೈಗೊಳ್ಳಲಾಗುವುದು.

ಶ್ರೀ ರಾಘವ ವಂದನಾರ್ಪಣೆ ಮಾಡಿದರು.

ಡಾ. ಎನ್. ತಿಪ್ಪೇಸ್ವಾಮಿ, ಕ.ಆ.ಸೇ.
ಅಪರ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಹಾವೇರಿ ಜಿಲ್ಲೆ